**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮುನಿರಾಜು ಗೌಡ ಪಿ.ಎಂ ಇವರು ನಿಯಮ-330ರ ಅಡಿಯಲ್ಲಿ ನೀಡಿರುವ ಸೂಚನಾ ಪತ್ರಕ್ಕೆ ಉತ್ತರ.**

**ವಿಷಯ**

ಸರ್ಕಾರಿ ಮುದ್ರಣಾಲಯದಲ್ಲಿ ಕಂಪ್ಯೂಟರ್ ಉಪಕರಣಗಳ ಖರೀದಿಸಿದ ಪ್ರಕರಣಕ್ಕೆ (ಸಿ.ಎ.ಜಿ ಪ್ಯಾರ 3.6 2016) ಸಂಬಂಧಿಸಿದಂತೆ ಇಲಾಖೆಯ ಅಧಿಕಾರಿ/ನೌಕರರುಗಳ ವಿರುದ್ಧ 2016ನೇ ಸಾಲಿನಲ್ಲಿ ನೋಟೀಸ್ ನೀಡಲಾಗಿದ್ದು, ಇದುವರೆವಿಗೂ ಈ ಪ್ರಕರಣವನ್ನು ಇತ್ಯರ್ಥಪಡಿಸದೆ ವಿಳಂಬಗೊಳಿಸಲು ಕಾರಣಗಳೇನು. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಸುತ್ತೋಲೆ ಹೊರಡಿಸಿರುವ ಪ್ರಕಾರ ಯಾವುದೇ ಸರ್ಕಾರಿ ನೌಕರರ ವಿರುದ್ಧ ನೋಟೀಸ್ ನೀಡಿದ 1 ವರ್ಷದ ಅವಧಿಯೊಳಗೆ ಇಲಾಖೆ ವಿಚಾರಣೆ ಪೂರ್ಣಗೊಳಿಸಿ ಇತ್ಯರ್ಥಪಡಿಸಬೇಕೆಂದು ತಿಳಿಸಿದ್ದರೂ ಸಹ ಈ ಪ್ರಕರಣವನ್ನು 06 ವರ್ಷಗಳ ಕಾಲ ವಿಳಂಬ ಮಾಡಿ, ಮುಂಬಡ್ತಿಯಲ್ಲಿ ಸದರಿ ಅಧಿಕಾರಿ/ನೌಕರರಿಗೆ ಅನ್ಯಾಯವಾಗಿರುವುದಕ್ಕೆ ಕಾರಣರಾದ ಅಧಿಕಾರಿ/ನೌಕರರ ವಿರುದ್ಧ ಸರ್ಕಾರ ಯಾವ ಕ್ರಮಕೈಗೊಂಡಿದೆ ಎಂಬುದರ ಬಗ್ಗೆ ಪ್ರಸ್ತಾಪಿಸಿರುವ ಕುರಿತು.

**ಉತ್ತರ**

ಮುದ್ರಣ ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆಯಲ್ಲಿ ಬಳಕೆದಾರರ ಅಗತ್ಯತೆಗಳನ್ನು ತಿಳಿದುಕೊಳ್ಳದೆ ಎಲೆಕ್ಟ್ರಾನಿಕ್ ಸಾಧನಗಳಲ್ಲಿ ಬಳಕೆ ಮಾಡುವ ವಸ್ತುಗಳನ್ನು ಮುಂಚಿತವಾಗಿ ಖರೀದಿ ಮಾಡಿದ ಹಾಗೂ ಇ-ಆಡಳಿತ ಇಲಾಖೆಯೊಂದಿಗೆ ಸಮಾಲೋಚಿಸದೇ ಎಲೆಕ್ಟ್ರಾನಿಕ್ ಸಾಧನಗಳಲ್ಲಿ ಬಳಸುವ ವಸ್ತುಗಳನ್ನು ಖರೀದಿಸಿದ್ದು, ಇದು ಬಳಕೆ ಮಾಡದೆ ದಾಸ್ತಾನು ಕೂಡಿಡುವಲ್ಲಿ ಪರಿಣಮಿಸಿ ಆ ದಾಸ್ತಾನು ಅಪ್ರಚಲಿತವಾಗಿ ರೂ 82.34 ಲಕ್ಷಕ್ಕೆ ಮಹಾಲೇಖಪಾಲರ ಆಕ್ಷೇಪಣೆಯ ಮೇರೆಗೆ ಮತ್ತು ಇಲಾಖಾ ನಿರ್ದೇಶಕರು ಪ್ರಸ್ತಾವನೆಗಳನ್ವಯ ಸರ್ಕಾರದ ಗಮನಕ್ಕೆ ತಂದಿದ್ದು, ಸರ್ಕಾರವು ಪ್ರಕರಣದ ಬಗ್ಗೆ ಒಂದು ಸ್ಪಷ್ಟ ನಿಲುವನ್ನು ಪಡೆಯುವ ಸಲುವಾಗಿ ಪ್ರಾಥಮಿಕ ತನಿಖೆಯನ್ನು ನಡೆಸಲು ತೀರ್ಮಾನಿಸಿ ಸರ್ಕಾರದ ಆದೇಶ ಸಂಖ್ಯೆ; ಇಡಿ 119 ಇಎಸ್ ಡಬ್ಲ್ಯೂ 2016 ದಿನಾಂಕ:16-01-2019 ರಲ್ಲಿ ತ್ರಿಸದಸ್ಯ ಸಮಿತಿಯೊಂದನ್ನು ರಚಿಸಿದ್ದು, ಅದರಂತೆ ತ್ರಿಸದಸ್ಯ ಸಮಿತಿಯು ದಿನಾಂಕ:09-12-2019 ರಲ್ಲಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿರುತ್ತದೆ.

ತ್ರಿಸದಸ್ಯ ಸಮಿತಿಯ ವರದಿಯ ಬಗ್ಗೆ ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಕಾರ್ಯಾಲಯ ರವರ ಅಭಿಪ್ರಾಯವನ್ನು ಆಧರಿಸಿ ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಕಾರ್ಯಾಲಯದಲ್ಲಿ ಖರೀದಿಗಳನ್ನು ವಿವಿಧ ಹಂತಗಳಲ್ಲಿ ಖರೀದಿ ಮೊತ್ತಕ್ಕೆ ಅನುಸರಿಸಿ ಖರೀದಿ

ಸಮಿತಿಗಳ ಮೂಲಕ ನಿರ್ವಹಿಸುವುದರಿಂದ ಇಲಾಖೆಯ ಅಧಿಕಾರಿಗಳನ್ನು ಜವಾಬ್ದಾರರನ್ನಾಗಿಸುವುದು ಸೂಕ್ತವಲ್ಲವೆಂದು ತೀರ್ಮಾನಕ್ಕೆ ಬಂದು, ಸರ್ಕಾರದ ಆದೇಶ ಸಂಖ್ಯೆ: ಇಡಿ 119 ಇಎಸ್‌ಡಬ್ಲ್ಯೂ 2016, ದಿನಾಂಕ:05.04.2021ರಂದು ಹೆಚ್ಚಿನ ಪ್ರಮಾಣದಲ್ಲಿ ಕಂಪ್ಯೂಟರ್ ಉಪಕರಣಗಳನ್ನು ಖರೀದಿಸಿ ಸರ್ಕಾರಕ್ಕೆ ನಷ್ಟ ಉಂಟು ಮಾಡಿದ ಪ್ರಕರಣಕ್ಕೆ ಸಂಬಂಧಿಸಿದ ಅಧಿಕಾರಿ / ಸಿಬ್ಬಂದಿಗಳನ್ನು ದೋಷಮುಕ್ತಗೊಳಿಸಿ, ಆದೇಶಿಸಲಾಗಿದೆ.

ತದನಂತರ ದಿನಾಂಕ:6.4.2021ರಂದು ನಡೆದ ಸಾರ್ವಜನಿಕ ಲೆಕ್ಕಪತ್ರ ಸಮಿತಿ ಸಭೆಯಲ್ಲಿ ಸಿ.ಎ.ಜಿ ವರದಿಯ ಕಂಡಿಕೆ:3.6/15-16 ಬಳಕೆ ಮಾಡದ / ಅಪ್ರಚಲಿತ ದಾಸ್ತಾನು ಫಲಪ್ರದವಲ್ಲದ ವೆಚ್ಚದಲ್ಲಿ ಪರಿಣಮಿಸಿದ್ದರ ಕುರಿತಂತೆ ಸುದೀರ್ಘವಾಗಿ ಚರ್ಚಿಸಿ, ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಮುಂದೆ ಸಿ.ಎ.ಜಿ ವರದಿಯ ಕಂಡಿಕೆ 3.6/15-16 ಇನ್ನೂ ಚರ್ಚೆಯಲ್ಲಿರುವಾಗಲೇ ಸಿ.ಎ.ಜಿ ವರದಿಯಲ್ಲಿನ ಆಕ್ಷೇಪಣೆಯ ಮೌಲ್ಯ ರೂ.82.34ಲಕ್ಷಗಳ ನಷ್ಟಕ್ಕೆ ಕಾರಣಕರ್ತರಾದ ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಕಾರ್ಯಾಲಯದ 20 ಜನ ಅಧಿಕಾರಿ / ನೌಕರರುಗಳನ್ನು ದಿನಾಂಕ:05.04.2021ರ ಆದೇಶದಲ್ಲಿ ದೋಷಮುಕ್ತಗೊಳಿಸಿರುವುದು ಸಮಂಜಸವಲ್ಲವೆಂದು ಚರ್ಚಿತವಾದ ಹಿನ್ನೆಲೆಯಲ್ಲಿ, ಸಿ.ಎ.ಜಿ ವರದಿಯ ಕಂಡಿಕೆ 3.6/15-16ರ ಬಗ್ಗೆ ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ಸೂಕ್ತ ತೀರ್ಮಾನವನ್ನು ತೆಗೆದುಕೊಳ್ಳುವವರೆಗೆ ಸದರಿ ಅಧಿಕಾರಿ / ನೌಕರರನ್ನು ದೋಷಮುಕ್ತರನ್ನಾಗಿಸುವುದು ಸರಿಯಲ್ಲವೆಂದು ತೀರ್ಮಾನಿಸಿ, ಆದೇಶ ಸಂಖ್ಯೆ: ಸರ್ಕಾರದ ಆದೇಶ ಸಂಖ್ಯೆ: ಇಡಿ 119 ಇಎಸ್ ಡಬ್ಲ್ಯೂ 2016, ದಿನಾಂಕ:05.04.2021ನ್ನು ಹೊರಡಿಸಿರುವ ಆದೇಶವನ್ನು ದಿನಾಂಕ:17.04.2021ರಂದು ಹಿಂಪಡೆಯಲಾಗಿದೆ.

ತ್ರಿಸದಸ್ಯ ಸಮಿತಿಯ ಪ್ರಾಥಮಿಕ ತನಿಖಾ ವರದಿಯನ್ನಾಧರಿಸಿ ಮುದ್ರಣ ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಕಾರ್ಯಾಲಯದಲ್ಲಿ ಅಗತ್ಯವಿಲ್ಲದಿದ್ದರೂ ಸಹ ಹೆಚ್ಚಿನ ಪ್ರಮಾಣದಲ್ಲಿ ಕಂಪ್ಯೂಟರ್ ಉಪಕರಣಗಳನ್ನು ಖರೀದಿಸಿ ಸರ್ಕಾರಕ್ಕೆ ನಷ್ಟ ಉಂಟು ಮಾಡಿರುವ ಪ್ರಕರಣದಲ್ಲಿ ಭಾಗಿಯಾದ ಅಧಿಕಾರಿ/ನೌಕರರಿಗೆ ಸರ್ಕಾರದ ಕಾರಣ ಕೇಳುವ ನೋಟಿಸ್ ಸಂಖ್ಯೆ:ಇಡಿ 119 ಇಎಸ್ ಡಬ್ಲ್ಯೂ 2016 ದಿನಾಂಕ:15.07.2022 ಮತ್ತು ದಿನಾಂಕ:26.07.2022 ರಂದು ನೋಟಿಸನ್ನು ಜಾರಿ ಮಾಡಲಾಗಿತ್ತು.

ಸದರಿ ನೋಟಿಸಿಗೆ ಈ ಕೆಳಕಂಡ ಆಪಾದಿತ ಅಧಿಕಾರಿ/ನೌಕರರುಗಳಿಂದ ರಕ್ಷಣಾ ಹೇಳಿಕೆಯನ್ನು ಪಡೆದು ಪ್ರಕರಣದ ಸತ್ಯಾಸತ್ಯತೆಯನ್ನು ತಿಳಿಯಲು ಸರ್ಕಾರದ ಆದೇಶ ಸಂಖ್ಯೆ:ಇಡಿ 119 ಇಎಸ್ ಡಬ್ಲ್ಯೂ 2016 ದಿನಾಂಕ:30.11.2022ರಲ್ಲಿ ನಿವೃತ ಜಿಲ್ಲಾ ನ್ಯಾಯಾಧೀಶರನ್ನು ಪ್ರಕರಣದ ವಿಚಾರಣಾಧಿಕಾರಿಯನ್ನಾಗಿ ನೇಮಿಸಿ ಇಲಾಖಾ ವಿಚಾರಣೆಗೆ ವಹಿಸಲಾಗಿದೆ.

1) ಶ್ರೀಮತಿ ಟಿ.ನಾರಾಯಣಮ್ಮ, ಉಪ ನಿರ್ದೇಶಕರು
2) ಶ್ರೀ ಬಿ.ಪಿ. ಶಾಂತಾನಂದ, ಅಧೀಕ್ಷಕರು,

3) ಶ್ರೀ ನಾಗಮಹೇಶ್, ಅಧೀಕ್ಷಕರು

4) ಶ್ರೀ ಬಿ.ಎಸ್.ಶಿವಕುಮಾರ್, ಅಧೀಕ್ಷಕರು,

5) ಶ್ರೀ ಮಂಜುನಾಥ ಆರ್. ಪ್ರಥಮ ದರ್ಜೆ ಸಹಾಯಕರು.

6) ಶ್ರೀಮತಿ ಕೋಕಿಲಾ ಹೆಚ್., ದ್ವಿತೀಯ ದರ್ಜೆ ಸಹಾಯಕರು.

7) ಶ್ರೀ ಗಜೇಂದ್ರ, ದಿನಗೂಲಿ ನೌಕರ(ಖಾಯಂ).

8) ಶ್ರೀಮತಿ ರೂಪ.ಎಂ., ದ್ವಿತೀಯ ದರ್ಜೆ ಸಹಾಯಕರು.

9) ಶ್ರೀ ಮಹಮ್ಮದ್ ಹರೀಫ್.ಎಂ., ದ್ವಿತೀಯ ದರ್ಜೆ ಸಹಾಯಕರು.

ಮುಂದುವರೆದು, ಪ್ರಕರಣದಲ್ಲಿ ಭಾಗಿಯಾದ ಈ ಕೆಳಕಂಡ ನಿವೃತ್ತ ಅಧಿಕಾರಿ/ನೌಕರರುಗಳ ವಿರುದ್ಧ ಸಿವಿಲ್ ದಾವೆ ಹೂಡಲು ಸರ್ಕಾರದ ಆದೇಶ ಸಂಖ್ಯೆ: ಇಡಿ 119 ಇಎಸ್‌ಡಬ್ಲ್ಯೂ 2016 ದಿನಾಂಕ: 06-12-2022 ರಲ್ಲಿ ಅನುಮತಿ ನೀಡಿ ಆದೇಶಿಸಿದೆ.

1) ಶ್ರೀ ರವಿಶಂಕರ್.ಎಂ, ನಿವೃತ್ತ ನಿರ್ದೇಶಕರು.

2) ಶ್ರೀಬಿ.ಎನ್.ಟಿ.ಗೌಡ, ಹಿಂದಿನ ಸಹಾಯಕ ನಿರ್ದೇಶಕರು ಹಾಗೂ ಉಪ ನಿರ್ದೇಶಕರು (ನಿವೃತ್ತ).

3) ಶ್ರೀ ಲಕ್ಷ್ಮಣಸ್ವಾಮಿ, ನಿವೃತ್ತ ಸಹಾಯಕ ನಿರ್ದೇಶಕರು.

4) ಶ್ರೀ ಆನಂದ್ ಎಸ್., ಪೂಜಾರ್, ಸಹಾಯಕ ನಿರ್ದೇಶಕರು. (ನಿಧನ ದಿನಾಂಕ:18.09.2020)

5) ಶ್ರೀಮತಿ ಅನುಸೂಯಮ್ಮ, ನಿವೃತ್ತ ಅಧೀಕ್ಷಕರು.

6) ಶ್ರೀ ವಿ.ರಾಮಚಂದ್ರ, ನಿವೃತ್ತ, ಸಹಾಯಕ ನಿರ್ದೇಶಕರು.

7) ಶ್ರೀ ಕೆ.ಎಂ.ಭುವನೇಶ್, ನಿವೃತ್ತ ಜಂಟಿ ನಿರ್ದೇಶಕರು.

8) ಶ್ರೀ ಮಹೇಶ್ವರ್, ನಿವೃತ್ತ ಸಹಾಯಕ ನಿರ್ದೇಶಕರು.

9) ಶ್ರೀ ಮೂಡ್ಲೇಗೌಡ, ನಿವೃತ್ತ ಪ್ರಥಮ ದರ್ಜೆ ಸಹಾಯಕರು.

10) ಶ್ರೀ ನಂಜುಂಡಸ್ವಾಮಿ, ನಿವೃತ್ತ ಅಧೀಕ್ಷಕರು.

11) ಶ್ರೀ ಹನುಮಂತರಾಯಪ್ಪ, ನಿವೃತ್ತ ಸಹಾಯಕ ನಿರ್ದೇಶಕರು.

ಪ್ರಕರಣದಲ್ಲಿ ಭಾಗಿಯಾದ ಅಧಿಕಾರಿ/ನೌಕರರಿಗೆ ಸರ್ಕಾರದ ಕಾರಣ ಕೇಳುವ ನೋಟಿಸ್ ಸಂಖ್ಯೆ:ಇಡಿ 119 ಇಎಸ್ ಡಬ್ಲ್ಯೂ 2016 ದಿನಾಂಕ:15.07.2022 ಮತ್ತು ದಿನಾಂಕ:26.07.2022 ರಂದು ನೋಟಿಸನ್ನು ಜಾರಿ ಮಾಡಲಾಗಿದ್ದು, ದಿನಾಂಕ:30.11.2022ರಲ್ಲಿ ಇಲಾಖಾ ವಿಚಾರಣೆಗೆ ವಹಿಸಲಾಗಿದೆ. ಈ ಹಿನ್ನಲೆಯಲ್ಲಿ ಇನ್ನೂ ಒಂದು ವರ್ಷದ ಅವಧಿಯು ಮುಗಿದಿರುವುದಿಲ್ಲ.

ಮುದ್ರಣ ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಕಾರ್ಯಾಲಯದಲ್ಲಿ ಅಗತ್ಯವಿಲ್ಲದಿದ್ದರೂ ಸಹ ಹೆಚ್ಚಿನ ಪ್ರಮಾಣದಲ್ಲಿ ಕಂಪ್ಯೂಟರ್ ಉಪಕರಣಗಳನ್ನು ಖರೀದಿಸಿ ಸರ್ಕಾರಕ್ಕೆ ನಷ್ಟ ಉಂಟು ಮಾಡಿರುವ ಪ್ರಕರಣದಲ್ಲಿ ಭಾಗಿಯಾದ ಎಲ್ಲಾ ಅಧಿಕಾರಿ/ನೌಕರರ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತಿದ್ದು, ಅಲ್ಲದೇ ಅಧಿಕಾರಿ/ನೌಕರರು ಸೇವೆಯಲ್ಲಿ ಅವರಿಗೆ ನೀಡಲಾದ ಕಾರ್ಯಭಾರದಲ್ಲಿ ಅವರ ನಿರ್ಲಕ್ಷ್ಯದಿಂದಾಗಿ ಉಂಟಾದ ದುರ್ನಡತೆ ಯಿಂದಾಗಿ ಹಾಗೂ ಆರ್ಥಿಕ ಪ್ರತ್ಯಾಯೋಜಿತ ಅಧಿಕಾರವನ್ನು ವಿವೇಚನೆಯಿಂದ ಬಳಸದ ಕಾರಣದಿಂದ ಈ ಪ್ರಕರಣವು ಉದ್ಭವವಾಗಿರುವ ಹಿನ್ನೆಲೆಯಲ್ಲಿ ಪ್ರಕರಣದಲ್ಲಿನ ಅಧಿಕಾರಿ/ನೌಕರರಿಗೆ ನಿಯಮಗಳ್ವನಯ ವಿಚಾರಣೆ ಪೂರ್ಣಗೊಂಡು ಪ್ರಕರಣವು ಇತ್ಯರ್ಥವಾಗುವ ತನಕ ಮುಂಬಡ್ತಿಯನ್ನು ನೀಡಲು ಅವಕಾಶವಿರುವುದಿಲ್ಲ. ಹೀಗಾಗಿ ಆರೋಪಿತ ಅಧಿಕಾರಿ/ನೌಕರರಿಗೆ ಮುಂಬಡ್ತಿ ನೀಡುವಲ್ಲಿ ವಿಳಂಬವಾಗಿದೆ/ ಅನ್ಯಾಯವಾಗಿದೆ ಎಂದು ಪರಿಗಣಿಸಲು ಆಸ್ಪದವಿರುವುದಿಲ್ಲ.

**ಸಂಖ್ಯೆ:ಇಪಿ 10 ಇಎಸ್‌ಡಬ್ಲ್ಯೂ 2023**

(ಬಿ.ಸಿ.ನಾಗೇಶ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ
ಹಾಗೂ ಸಕಾಲ ಸಚಿವರು